

‘ಛೇ, ಎಂದಿಗಾದರೂ ಅದು ಸಾಧ್ಯವೇ? ಪಾಪ, ತಬ್ಬಲಿಯಾದ ಕರುವನ್ನು ಆಕಳುತಾಯಿ ಸಂತೈಸಿ, ಚೆಂದದಿಂದಲಿ ಪೊರೆಯುವಂತೆ ಪೊರೆದಿದ್ದಾರೆ. ಇದುವರೆವಿಗೂ ನನ್ನೊಡನೆ ಸದಾ ಮಮತೆಯೊಡನೆ ನಿರ್ಮಲ ಅಂತಃಕರಣ ಬೆರೆಸಿದಂತೆ ನಡೆದುಕೊಂಡಿದ್ದಾರೆ. ನನ್ನ ತಾಯಿ ಸುಮಿತ್ರಾಮಾತೆಯ ನೆನಪು ಅರೆಕ್ಷಣವೂ ಕಾಡದಂತೆ ಸಲಹುತ್ತಿದ್ದಾರೆ. ಅತ್ತಿಗೆಯನ್ನು ನಾನು ‘ಸೀತಮ್ಮ’ ಎಂದು ಕರೆಯುವುದೆಂದು ಅಣ್ಣನಿಗೂ ಗೊತ್ತು. ನಿಜವಾಗಿ ಆಕೆ ನನಗೆ ಎರಡನೆಯ ತಾಯಿಯೇ. ಆದರೂ ಅಣ್ಣನು ಹೀಗೇಕೆ ಎಚ್ಚರಿಕೆಯಿಂದ ಕಾವಲಿರು ಎಂದು ಒತ್ತಿ ಹೇಳಿದನು? ಮೈಯೆಲ್ಲಾ ಕಣ್ಣಾಗಿ ಕಾವಲಿರು ಎನ್ನುವ ಮಾತನ್ನು ಏಕೆ ಆಡಿದನು?’

ಲಕ್ಷ್ಮಣನ ಲಹರಿ ಮುಂದುವರೆಯಿತು. ನಾನು ನೋಡಿದಂತೆ, ಅಣ್ಣ ಅತ್ತಿಗೆ ಮಾತುಬಿಟ್ಟಿರುವುದು ಇದೇ ಮೊದಲ ಬಾರಿ. ಇಬ್ಬರೂ ಸದಾ ಅನ್ಯೋನ್ಯವಾಗಿ ಇರುತ್ತಿದ್ದರು. ಅಣ್ಣನಿಗೆ ಅತ್ತಿಗೆಯ ಮೇಲೆ ಅಪಾರ ಅಭಿಮಾನ. ಅತ್ತಿಗೆ ಸಹ ಅಣ್ಣನಿಗೆ ಅನುರೂಪದ ಮಡದಿ. ನನ್ನ ಮೇಲಂತೂ ಆಕೆಗೆ ಸೋದರಭಾವ. ಕೆಲವೊಮ್ಮೆ ಪುಟ್ಟ ಮಗುವಿನ ಹಾಗೆಯೂ ನೋಡುವರು. ತಮಾಷೆಯಿಂದ ಗೋಳುಹೊಯ್ದು ರೇಗಿಸಿ, ಕಾಲೆಳೆದು ಕಾಡಿಸಿದ್ದೇನು ಕಡಿಮೆಯೇ?! ಅಂದು ಆ ಶೂರ್ಪನಖಿಯ ಪ್ರಸಂಗವು ನಡೆಯದಿದ್ದರೆ ಎಷ್ಟು ಚೆಂದವಿರುತ್ತಿತ್ತು. ಆ ಘಟನೆ ನಡೆದ ಮೇಲೆಯೇ ಅಲ್ಲವೇ ಅತ್ತಿಗೆ ಹೆಚ್ಚು ಅಂತರ್ಮುಖಿಯಾದದ್ದು. ಅಲ್ಲದೇ ಏನು, ಮೊದಲೆಲ್ಲಾ ಅದೆಷ್ಟು ಮಮತೆಯಿಂದ “ಬಾ ಇಲ್ಲಿ ಲಕ್ಷ್ಮಣಾ, ಇದನ್ನು ಸೇವಿಸು. ಕಾಡಿನ ನಾರು ಬೇರುಗಳಿಂದ ನಾನೇ ಶೋಧಿಸಿ ಸಂಶೋಧಿಸಿ ಮಾಡಿರುವ ಹೊಸರುಚಿ, ಹೇಗಿದೆ ಹೇಳು. ನೀನೋ ಒಬ್ಬ ಅಲೆಮಾರಿಯ ಹಾಗೆ ಕಾಡನ್ನೆಲ್ಲಾ ಹೊತ್ತು ಗೊತ್ತು ಇಲ್ಲದೆ ಅಲೆದಾಡುತ್ತಿರುತ್ತೀಯೆ. ಈ ಕಷಾಯ ಕುಡಿ ಶೀತವಾಗದು. ಇಗೋ ನೆತ್ತಿಗೆ ಈ ಕಾಡುಹರಳಿನಿಂದ ತಯಾರಿಸಿದ ಎಣ್ಣೆ ಒತ್ತಿಕೋ ಉಷ್ಣವಾಗದು. ಈಗಿಲ್ಲಿ ನಾವು ನಿನ್ನನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ, ಅರಮನೆಗೆ ಹಿಂದಿರುಗಿದ ಮೇಲೆ ನನ್ನ ತಂಗಿ ಊರ್ಮಿಳೆ ಅಲ್ಲಾ, ನಿನ್ನ ಪ್ರಿಯ ಮಡದಿ ಊರ್ಮಿ ನನ್ನನ್ನೂ ನಿನ್ನ ಅಣ್ಣನನ್ನೂ ಸುಮ್ಮನೆ ಬಿಡುವಳೇ! ‘ಏನಿದು ನನ್ನ ಗಂಡನ ಈ ಅವಸ್ಥೆ? ಇದಾರು ಈ ಕಾಡು ಮಾನವ! ಇದೇನು ಮಾಡಿರಿ ನನ್ನ ಲಕ್ಷ್ಮಣನಿಗೆ ’ ಎಂದು ತರಾಟೆ ತೆಗೆದುಕೊಳ್ಳದಿರಳೇ?” ಎಂದೆಲ್ಲಾ ಹೇಳಿ ಮಾತಿಗೊಮ್ಮೆ ನನ್ನ ಊರ್ಮಿಯನ್ನು ನೆನಪಿಸುತ್ತಾ, ಒಂಟಿ ಬದುಕಿನ ನೀರಸವನ್ನು ಕಳೆದು, ಈ ಕಾಡು ಬದುಕಿನಲ್ಲಿಯೂ ನಾನು ನವೋತ್ಸಾಹದಿಂದ ಪುಟಿಯುವಂತೆ ಮಾಡುತ್ತಿದ್ದರು. ಅತ್ತಿಗೆ ಎಂದರೆ ನನಗೆ ಮತ್ತೊಬ್ಬ ತಾಯಿ ಮಾತ್ರವಲ್ಲ. ನನ್ನ ಪ್ರಿಯ ಸ್ನೇಹಿತೆಯೂ ಆಗಿದ್ದಾರೆ. ರಾಮಣ್ಣನೊಡನೆ ನನಗಿರುವ ಅಲ್ಪಸ್ವಲ್ಪ ಭಯ, ಅಂಜಿಕೆ ಅಳುಕುಗಳು ಸೀತಮ್ಮನೊಡನೆ ಇರುವಾಗ ಹತ್ತಿರಕೂಡ ಸುಳಿಯುವುದಿಲ್ಲವಲ್ಲ...!’ ಬಿಗಿದ ತುಟಿಗಳ ಅಂಚು ನಗೆಯ ಸುಳಿಗೆ ಕೊಂಕಿತು.